OCTOBER 19, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ದೇಶದಲ್ಲಿ, 43 ಕೋಟಿ ಜನರು** ಸಣ್ಣ ಉದ್ಯಮ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವುದು, ಹೆಮ್ಮೆಯ ಸಂಗತಿಯಾಗಿದೆ ಎಂದು ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಖಾತೆ, ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ ಹೇಳಿದರು. ಮೈಸೂರು, ಚಾಮುಂಡಿ ಬೆಟ್ಟಕ್ಕೆ ಕಾಲ್ನಡಿಗೆ ಮೂಲಕ ತೆರಳುವ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ನವೋದ್ಯಮಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ವಿದೇಶಗಳಲ್ಲಿ ಬೇಡಿಕೆಯಿರುವ ವಸ್ತುಗಳ ಉತ್ಪಾದನೆಗೆ ವಿಶೇಷ ಆದ್ಯತೆ ನೀಡಲಾಗುತ್ತಿದೆ. ಉದ್ಯಮ್ ಪೋರ್ಟಲ್ ನಲ್ಲಿ, 9 ಕೋಟಿ 75 ಲಕ್ಷಕ್ಕೂ ಅಧಿಕ ಉದ್ಯಮಿಗಳು ತಮ್ಮ ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದರು.

<><><>

**ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ** ಸಚಿವಾಲಯ, ಮೈಸೂರು ದಸರಾ ಮಹೋತ್ಸವ –2026 ರ ಅಂಗವಾಗಿ, ಆಯೋಜಿಸಿರುವ, ಶಿಲ್ಪ ಸಮಾಗಮ ಮೇಳದಲ್ಲಿ, ವಿವಿಧ ರಾಜ್ಯಗಳ, ಕರಕುಶಲ ಹಾಗೂ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಜರುಗುತ್ತಿದೆ. ಸಚಿವಾಲಯದ ಕಾರ್ಯದರ್ಶಿ, ಸುಧಾಂಶ ಪಂಥ, ಶಿಲ್ಪ ಸಮಾಗಮ ಮೇಳಕ್ಕೆ ಭೇಟಿ ನೀಡಿ, ಮಳಿಗೆಗಳನ್ನು ವೀಕ್ಷಿಸಿ, ಮಾತನಾಡಿದರು.

<><><>

**ಸುಧಾಂಶ ಪಂಥ ಧ್ವನಿ– 36 ಸೆಕೆಂಡುಗಳು**

<><><>

**ಕಂಬಳ ಕರಾವಳಿಯ ಸಾಂಸ್ಕೃತಿಕ ಪ್ರತೀಕವಾಗಿದ್ದು**, ನಾಡಿನ ಕ್ರೀಡೆಯಾಗಿದೆ. ರಾಜ್ಯ ಸರ್ಕಾರ ಒಟ್ಟು 23 ಕಂಬಳ ಕೂಟಗಳಿಗೆ, ತಲಾ 5 ಲಕ್ಷ ರೂಪಾಯಿ ಧನ ಸಹಾಯ ಒದಗಿಸುತ್ತಿದೆ ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ತಿಳಿಸಿದ್ದಾರೆ. ಮೈಸೂರಿನಲ್ಲಿ ಆಯೋಜಿತ ವಿಜಯ– ದಶಮಿ, ಜೋಡುಕರೆ ಕಂಬಳ ಕ್ರೀಡೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಸಂಸ್ಕೃತಿ, ಸಂಪ್ರದಾಯ ಗೌರವಿಸಿ ಪಾಲಿಸಬೇಕು, ಕಲೆಯನ್ನು ಪ್ರೋತ್ಸಾಹಿಸಬೇಕು, ಪರಂಪರೆಯನ್ನು ಉಳಿಸಬೇಕು ಎಂದು ಕರೆ ನೀಡಿದರು.

<><><>

**ಮೈಸೂರು ದಸರಾ ಪ್ರಯುಕ್ತ**, ರೈತ ದಸರಾ ಉಪ ಸಮಿತಿ ವತಿಯಿಂದ ಆಯೋಜಿತ, ಶ್ವಾನ ಪ್ರದರ್ಶನ ಕಾರ್ಯಕ್ರಮವನ್ನು, ಪಶು ಸಂಗೋಪನೆ ಮತ್ತು ರೇಷ್ಮೆ ಖಾತೆ ಸಚಿವ ಸಿ. ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು. ಈ ಬಾರಿ, 800 ಕ್ಕೂ ಹೆಚ್ಚು ಶ್ವಾನಗಳು, ಪ್ರದರ್ಶನಗೊಂಡವು.

<><><>

**ಶಿವಮೊಗ್ಗದ ಅಲ್ಲಮಪ್ರಭು** ಮೈದಾನದಲ್ಲಿ ಆಯೋಜಿತ, ಯೋಗ ದಸರಾದಲ್ಲಿ, ಸಾವಿರಾರು ಯೋಗಪಟುಗಳು ಪಾಲ್ಗೊಂಡರು. ಶಾಸಕ ಎಸ್.ಎನ್. ಚನ್ನಬಸಪ್ಪ, ಸಾಮೂಹಿಕ ಯೋಗ ಪ್ರದರ್ಶನಕ್ಕೆ ಚಾಲನೆ ನೀಡಿದರು.

<><><>

**ಆಯುಧಪೂಜೆ ಹಾಗೂ ವಿಜಯದಶಮಿ** ಹಬ್ಬದ ಪೂರ್ವ ಸಿದ್ಧತೆಗಾಗಿ, ಧಾರವಾಡದ ಸುಭಾಸ ರಸ್ತೆ, ಸೂಪರ್ ಮಾರುಕಟ್ಟೆಯಲ್ಲಿ, ಖರೀದಿ ಭರಾಟೆ ಜೋರಾಗಿತ್ತು. ಹೂವು, ಹಣ್ಣು, ಬಾಳೆಕಂದು, ಬೂದುಗುಂಬಳ ಸೇರಿದಂತೆ, ಪೂಜೆಗೆ ಅಗತ್ಯ ಸಾಮಗ್ರಿಗಳು, ಹಬ್ಬದ ಆಚರಣೆಗೆ ಬೇಕಾದ ವಸ್ತುಗಳನ್ನು ಖರೀದಿಸುವಲ್ಲಿ ಜನ ನಿರತರಾಗಿದ್ದರು.

<><><>

**ಶಿಕ್ಷಣ ತಜ್ಞ, ತುಮಕೂರು** ವಿದ್ಯಾವಾಹಿನಿ ಸಂಸ್ಥೆ ಸ್ಥಾಪಕ ಕೆ.ಬಿ ಜಯಣ್ಣ ನಿಧನರಾದರು. ಉಪ ಮುಖ್ಯಮಂತ್ರಿ ಡಾಕ್ಟರ ಜಿ.ಪರಮೇಶ್ವರ ಕಂಬನಿ ಮಿಡಿದಿದ್ದು, ಸಂತಾಪ ಸೂಚಿಸಿದ್ದಾರೆ.

<><><>

**ಹೆಸರಾಂತ, ಬುರ್ರಕಥಾ ಜಾನಪದ ಕಲಾವಿದೆ,** ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ, ಯಾದಗಿರಿ ಜಿಲ್ಲೆ, ಶಹಾಪುರದ ಲಕ್ಷ್ಮೀಬಾಯಿ ರೇವಲ್ ನಿಧನರಾದರು. ಅವರಿಗೆ 78 ವರ್ಷ ವಯಸ್ಸಾಗಿತ್ತು. 2014 ರಲ್ಲಿ ರಾಜ್ಯ ಸರ್ಕಾರ ಅವರಿಗೆ, ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು. ಲಕ್ಷ್ಮೀಬಾಯಿ ಅವರ ನಿಧನಕ್ಕೆ, ಸಿದ್ದೇಶ್ವರ ಸ್ವಾಮೀಜಿ ಸಾಂಸ್ಕೃತಿಕ ಮತ್ತು ಗ್ರಾಮೀಣಾಭಿವೃದ್ಧಿ ಶಿಕ್ಷಣ ಸಂಸ್ಥೆ ವತಿಯಿಂದ, ನಗರದ ಬಸವೇಶ್ವರ ವೃತ್ತದಲ್ಲಿ ಸಂತಾಪ ಸೂಚಿಸಲಾಯಿತು.

<><><>

**ವಿಜಯನಗರ ಜಿಲ್ಲೆಯಲ್ಲಿ,** ಮಾದಕ ವಸ್ತುಗಳ ಮಾರಾಟ, ಬಳಕೆ ವಿರುದ್ಧ ಪ್ರಸಕ್ತ ಸಾಲಿನಲ್ಲಿ, ಕೈಗೊಂಡ ಕಾರ್ಯಾಚರಣೆಯಲ್ಲಿ, ಒಟ್ಟು 27 ಪ್ರಕರಣಗಳನ್ನು ದಾಖಲಿಸಲಾಗಿದೆ, 13 ಆರೋಪಿಗಳ ಮೇಲೆ ಕಾನೂನು ಕ್ರಮ ಜರುಗಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ತಿಳಿಸಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿತ, ಜಿಲ್ಲಾ ಮಟ್ಟದ ಮಾದಕ ವಸ್ತು ದುರ್ಬಳಕೆ ತಡೆ ಸಮನ್ವಯ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು. ಜಿಲ್ಲೆಯಾದ್ಯಂತ ಮಾದಕ ವಸ್ತು ಸೇವನೆ ಹಾಗೂ ಸಾಗಾಟಕ್ಕೆ ಕಡಿವಾಣ ಹಾಕಲು ಸಾರ್ವಜನಿಕ ಪ್ರದೇಶಗಳಲ್ಲಿ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

<><><>

**ಕರ್ನಾಟಕ ವಿಧಾನ ಪರಿಷತ್, ಪಶ್ಚಿಮ ಪದವಿಧರ** ಮತಕ್ಷೇತ್ರದ ಚುನಾವಣೆ ಹಿನ್ನೆಲೆ, 21 ನೇ ತಾರೀಖು ಸಂಜೆ ನಾಲ್ಕರಿಂದ, 48 ಗಂಟೆಗಳ ಕಾಲ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಮದ್ಯ ಮಾರಾಟ ಹಾಗೂ ಸಾಗಾಟ ನಿಷೇಧಿಸಿ, ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಆದೇಶ ಹೊರಡಿಸಿದ್ದಾರೆ.

<><><>

**ಬೆಂಗಳೂರು, ಆಲೂರಿನಲ್ಲಿ ಆಯೋಜಿತ,** ರಣಜಿ ಟ್ರೋಫಿ ಪಂದ್ಯದ, ಎರಡನೇ ದಿನವಾದ ಇಂದು, ಕರ್ನಾಟಕ ತಂಡವು, ಸೌರಾಷ್ಟ್ರ ವಿರುದ್ಧ ಪ್ರಥಮ ಇನ್ನಿಂಗ್ಸ್ ನಲ್ಲಿ, ಇತ್ತೀಚಿನ ವರದಿ ಬಂದಾಗ, 8 ವಿಕೆಟ್ ನಷ್ಟಕ್ಕೆ 340 ರನ್ ಗಳಿಸಿದೆ. ಕರ್ನಾಟಕ ಪರ ಮನ್ವಂತ ಕುಮಾರ 135 ರನ್ ಗಳಿಸಿ, ಶತಕ ಸಿಡಿಸಿ, ಆಟವಾಡುತ್ತಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>